## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.

## M.V.C.1109/2020

**ಸಾಕ್ಷಿಯನ್ನು ದಿಃ 06.03.2026 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆಃ 3ನೇ ಎದುರುದಾರರ ಪರ ಶ್ರೀ. ಪಿ ಡಿ ವಕೀಲರಿಂದಃ–**

**ನಾನು ಈ ಅರ್ಜಿಯಲ್ಲಿ 3ನೇ ಎದುರುದಾರ ಸಂಸ್ಥೆಯ ಡೆಪ್ಯೂಟಿ ಮ್ಯಾನೇಜರ್ ಲೀಗಲ್ ಆಗಿದ್ದು , ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಹೇಳಿರುವ ಸಂಗತಿಗಳೆಲ್ಲ ಸತ್ಯವಾಗಿದ್ದು ಸಹಿ ಮಾಡಿದ್ದೇನೆ.**

ಮಾಹಿತಿ ಹಕ್ಕು ಕಾಯಿದೆ ಅಡಿಯಲ್ಲಿ ಅರ್ಜಿ ಸಲ್ಲಿಸಿದ ಬಾಬ್ತು ಹಣಪಾವತಿಸಿದ ಬಗ್ಗೆ ರಶೀದಿಯನ್ನು ನಿ ಆರ್ –5 ಎಂದು, ಒಂದು ಅಂಚೆ ರಶೀದಿಯನ್ನು ನಿ ಆರ್ –6 ಎಂದು , ಮಾಹಿತಿ ಹಕ್ಕು ಕಾಯಿದೆ ಅಡಿಯಲ್ಲಿ ಸಲ್ಲಿಸಿದ ಅರ್ಜಿಯ ಕಛೇರಿ ಪ್ರತಿಯನ್ನು ನಿ ಆರ್ –7 ಎಂದು , ಸಾಕ್ಷಿ ನುಡಿಯಲು ಸಂಸ್ಥೆಯಿಂದ ನೀಡಿದ ಅಧಿಕಾರ ಪತ್ರವನ್ನು ನಿ ಆರ್ –8 ಎಂದು , ವಿಮಾಪಾಲಿಸಿಯನ್ನು ನಿ ಆರ್ –9 ಎಂದು , ಮಾಹಿತಿ ಹಕ್ಕು ಕಾಯಿದೆ ಅಡಿಯಲ್ಲಿ ಸಲ್ಲಿಸಿದ ಅರ್ಜಿಗೆ ಐ ಆರ್ ಡಿ ಎ ಐ ವತಿಯಿಂದ ನೀಡಿದ ಉತ್ತರವನ್ನು ನಿ ಆರ್ –10 ಎಂದು, ಸದರಿ ಉತ್ತರದೊಂದಿಗೆ ಬಂದ ನಮ್ಮ ಅರ್ಜಿಯ ಸ್ವೀಕೃತಿ ಪತ್ರದ ನಕಲನ್ನು ನಿ ಆರ್ –11 ಎಂದು, ದಿನಾಂಕಃ 02.04.2020 ಹಾಗೂ 16.04.2020 ರ ಐ ಆರ್ ಡಿ ಎ ಐ ರವರ ಸುತ್ತೋಲೆ ಗಳನ್ನು ನಿ ಆರ್ –12 ಮತ್ತು 13 ಎಂದು, ಅದನ್ನು ನಮಗೆ ಕಳುಹಿಸಿದ ಬಗ್ಗೆ ನಿಶಾನೆ ಲಕೋಟೆಯನ್ನು ನಿ ಆರ್ –14 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ 1, 2 ಎ ಮತ್ತು ಸಿ ಎದುರುದಾರರ ಪರ ಶ್ರೀ ಎಸ್ ಎಸ್ ಜೆ ವಕೀಲರಿಂದಃ**

**1 , 2** ಎ ಮತ್ತು ಸಿ ಎದುರುದಾರರು ಹಾಗೂ ಅವರ ವಕೀಲರನ್ನು ಕರೆಯಲಾಯಿತು. ಗೈರು ಹಾಜರಿ. ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪಾಟೀಸವಾಲುಃ ಅರ್ಜಿದಾರರ ಪರ ಶ್ರೀ. ಎಂ ವಿ ಜೆ ವಕೀಲರಿಂದಃ**

ಈ ಪ್ರಕರಣದ ಅಪಘಾತಕ್ಕೆ ಸಂಬಂಧಪಟ್ಟಂತೆ ನಾನು ಎಲ್ಲಾ ದಾಖಲೆಗಳನ್ನು ಓದಿ ತಿಳಿದುಕೊಂಡಿದ್ದೇನೆ. 1 ಮತ್ತು 2ನೇ ಎದುರುದಾರರ ವಿರುದ್ಧ ದೋಷಾರೋಪಣೆ

ಪತ್ರವನ್ನು ಸಲ್ಲಿಸಿದ್ದಾರೆ ಎಂದರೆ ವಿಮಾ ಪಾಲಿಸಿ ಇಲ್ಲ ಎಂದು , ಅತೀವೇಗ ಅಜಾಗರೂಕತೆಯಿಂದ ಅಪಘಾತವಾಗಿದೆ ಎಂದು ಹಾಗೂ ಚಾಲಕನ ಬಳಿ ಡಿ ಎಲ್ ಇರಲಿಲ್ಲ ಎಂದು ದೋಷಾರೋಪಣಾ ಪತ್ರ ಸಲ್ಲಿಸಿದ್ದಾರೆ. ನಮ್ಮ ಸಂಸ್ಥೆಯಿಂದ ನೀಡಿದ ನಿ ಆರ್ – 9 ರ ಪಾಲಿಸಿ ದಿನಾಂಕಃ 18.10.2019 ರಿಂದ 17.10.2020 ರ ವರೆಗೆ ಚಾಲ್ತಿಯಲ್ಲಿತ್ತು ಎಂದರೆ ಸರಿ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಹೊರಡಿಸಿದ ಅಧಿಸೂಚನೆಗಳಿಗೆ ಅನುಗುಣವಾಗಿ ಪಾಲಿಸಿ ನೀಡಲಾಗುತ್ತದೆ ಎಂದರೆ ಸರಿಯಲ್ಲ. ಐಆರ್ ಡಿಎಐ ರವರ ನಿಯಮಗಳಿಗೆ ಅನುಗುಣವಾಗಿ ಪಾಲಿಸಿ ನೀಡಲಾಗುತ್ತದೆ. ಸದರಿ ಐಆರ್ ಡಿಎಐ ಯಾವ ಕಾಯಿದೆ 1999 ರ ಪ್ರಕಾರ ಕಾರ್ಯ ನಿರ್ವಹಿಸುತ್ತದೆ. ಸದರಿ ಅಧಿಸೂಚನೆಯನ್ನು ಸಂಸತ್ ಜಾರಿ ಗೊಳಿಸುತ್ತದೆ. ಸಂಸತ್ ನಲ್ಲಿ ರಚನೆಯಾಗುವ ಕಾಯಿದೆಯ ಅಡಿಯಲ್ಲಿ ಐಆರ್ ಡಿಎಐ ರೂಪು ಗೊಂಡಿದೆ ಎಂದರೆ ಸರಿ. 2020 ಕೋರೋನ ಸಮಯ ಎಂದರೆ ಸ್ವಲ್ಪ ಅವಧಿ ಕೋರೋನ ಇತ್ತು. 23.03.2020 ರಿಂದ 31.12.2020 ರವರೆಗೆ ಕೋರೋನ ಇತ್ತು. ಯಾವ ಸ್ವರೂಪದಲ್ಲಿತ್ತು ಎಂದು ಈಗ ಹೇಳಲಾಗುವುದಿಲ್ಲ. ಕೋರೋನ ಸಮಯದಲ್ಲಿ ಸಂಪೂರ್ಣವಾಗಿ ಜನ ಸಂಚಾರ ಸ್ಥಗಿತ ಗೊಂಡಿತ್ತು ಎಂದರೆ ಸಂಪೂರ್ಣವಾಗಿ ಸ್ಥಗಿತ ಆಗಿರಲಿಲ್ಲ. ಎಲ್ಲಿಯವರೆಗೆ ಲಾಕ್ ಡೌನ್ ಇತ್ತು ಎಂದರೆ ಲಾಕ್ ಡೌನ್ ಸಮಯದಲ್ಲಿ ಸಾಮಾಜಿಕ ಅಂತರ ಕಾಯ್ದು ಕೊಂಡು ಅಗತ್ಯ ಸೇವೆಗಳು ಇತ್ತು. ಅನಿವಾರ್ಯ ಸಂದರ್ಭದಲ್ಲಿ ಮಾತ್ರ ಓಡಾಡಲು ಅವಕಾಶ ಇತ್ತು ಎಂದರೆ ಅವಶ್ಯ ಸೇವೆಗಳಿಗೆ ಅವಕಾಶ ಇತ್ತು. 2020 ಮಾರ್ಚ್ ನಿಂದ ಡಿಸೆಂಬರ್ ವರೆಗೆ ಯಾವುದೇ ಸರ್ಕಾರಿ ಕಛೇರಿಗಳು ಕಾರ್ಯ ನಿರ್ವಹಿಸುತ್ತಿರಲಿಲ್ಲ ಎಂದರೆ ಬ್ಯಾಂಕಿಂಗ್ , ವಿಮಾ ಸೌಲಭ್ಯ ಮತ್ತು ಆರೋಗ್ಯ ಸೇವೆ ಹಾಗು ಕಾನೂನು ಸುವ್ಯವಸ್ಥೆಯ ಇಲಾಖೆಗಳು ತೆರೆದಿದ್ದವು. ಕೋರೋನ ಸಮಯದಲ್ಲಿ ವಿಮಾ ಸಂಸ್ಥೆಗಳು ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಎಂದರೆ ಮುಚ್ಚಬೇಕು ಎಂಬ ಆದೇಶ ಇರಲಿಲ್ಲ. ಮಾರ್ಚ್2020 ರಿಂದ ನಮ್ಮ ವಿಮಾ ಸಂಸ್ಥೆ ಚಾಲ್ತಿಯಲ್ಲಿತ್ತು.

( ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಲಾಗಿ ನೀಡಲಾಗಿದೆ).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.